ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾನನ ಸಬ್ ಡಿವಿಜಕ್‌ಗೆ ಎಷ್ಟು ತಾಲ್ಲೂಕುಗಳು ಸೇರಿವೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಯಾವ ಭಾಗಗಳು ಸೇರಿವೆ ಎನ್ನುವುದು ನನ್ನ ಮುಂದೆ ಇಲ್ಲ. ಸಬ್ ಡಿವಿಜಕ್ ವಿಷಯ ಕೇಳಿದ್ದೀರಿ, ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಇದರಲ್ಲಿ ಒಂದು ಸಬ್ ಡಿವಿಜಕ್‌ಗೆ ಹೆಚ್ಚು ಇನ್ನೊಂದು ಸಬ್ ಡಿವಿಜಕ್‌ಗೆ ಕಡಮೆ ಹಣ ಕೊಡಲಿಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಕೆಲಸದ ಅವಶ್ಯಕತೆ ಮೇಲೆ ಹೋಗುತ್ತದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—1956-57ರಲ್ಲಿ ನಕರೇಶಪುರ ಸಬ್ ಡಿವಿಜನ್ನಿನ total expenditure 10,71,350; tank restorationಗೆ 2,45,724 ರೂಪಾಯಿ ಖರ್ಚಾಗಿದೆ. ಉಳಿದ ಎಂಟು ಲಕ್ಷ ರೂಪಾಯಿ ಹೇಗೆ ಖರ್ಚುಮಾಡಲಾಯಿತು?

ಶ್ರೀ ಎಚ್. ಎಂ. ಚನ್ನಬಸಪ್ಪ.—ರಸ್ತೆಗಳಿಗೆ, ಮೇಜರ್ ಇರಿಗೇಷಕ್‌ಗೆ, ಒರಿಜಿನರ್ ವರ್ಕ್ಸ್‌ಗೆ, ಕಟ್ಟಡಗಳಿಗೆ ಈ ರೀತಿ ಖರ್ಚು ಮಾಡಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಮೇಜರ್ ಇರಿಗೇಷಕ್ ಯಾವುದು ಮಾಡಿದ್ದೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮೇಜರ್ ಇರಿಗೇಷಕ್ ಒಂದೇ ಅಲ್ಲ. ಇರಿಗೇಷಕ್ ವರ್ಕ್ಸ್ ಎಂದರೆ ಮೇಜರ್, ಮೈನರ್, ಮೀಡಿಯಂ, ರಿಪೇರ್ಸ್, ರೆಸ್ಟೊರೇಷಕ್, ಕಮ್ಯೂನಿಕೇಷಕ್‌ಸ್ ಇವೆಲ್ಲಾ ಬರುತ್ತದೆ.

ಶ್ರೀ ಬಿ. ಎಸ್. ಶಂಕರಪ್ಪ.—ಮಾನ್ಯ ಮಂತ್ರಿಗಳು ಕೆಲಸದ ಅವಶ್ಯಕತೆಯ ಮೇಲೆ ಕೊಡುತ್ತೇವೆ ಎಂದು ಹೇಳಿದರು. ಹಾಗಲ್ಲ. ಯಾವ ಡಿವಿಜಕ್‌ನಲ್ಲಿ ಇಕ್ಷ್ಲೂಯೆನ್ಸ್ ಹೆಚ್ಚಾಗಿರುತ್ತದೆಯೋ ಅಲ್ಲಿಗೆ ಹೆಚ್ಚಾಗಿ ಕೊಡುತ್ತಾರೆ ಎಂಬುದು ಗೊತ್ತೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತಪ್ಪು ಅಭಿಪ್ರಾಯ.

ಶ್ರೀ ಬಿ. ಎಸ್. ಶಂಕರಪ್ಪ.—ಅಂಥಾದ್ದು ತಮ್ಮ ಗಮನಕ್ಕೆ ಬಂದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದಾಗ ನೋಡೋಣ.

ಶ್ರೀ ಎಕ್. ಜಿ. ನರಸಿಂಹೇಗೌಡ.—ಎರಡು ಲಕ್ಷ 75 ಸಾವಿರ ಜನಸಂಖ್ಯೆಯಿರತಕ್ಕ ಚನ್ನರಾಯಪಟ್ಟಣ ಸಬ್ ಡಿವಿಜಕ್‌ಗೆ ಬಹಳ ಕಡಮೆ ಹಣ ಕೊಡಲು ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಡಮೆ ಹಣ ಕೊಟ್ಟಿಲ್ಲ, ಖರ್ಚಾಗಿರುವುದು ಅಷ್ಟು ಎಂದು ಹೇಳಿದ್ದೇವೆ.

ಶ್ರೀ ಎಕ್. ಜಿ. ನರಸಿಂಹೇಗೌಡ.—ಸುಮಾರು 200 ಕೆರೆಗಳ ಜೀರ್ಣೋದ್ಧಾರವಾಗಬೇಕಾಗಿದ್ದು ಅರ್ಜಿ ಕೊಟ್ಟಿದ್ದರೂ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅರ್ಜಿಬಂದಮೇಲೆ ಯಾವ ಯಾವ ಕೆಲಸಗಳಿಗೆ ಅರ್ಜಿ ಹಾಕಿದ್ದಾರೆ ಎಂಬುದನ್ನು ಪರಿಶೀಲನೆ ಮಾಡಬೇಕು. ಯಾವುದು feasible, ಯಾವುದು unfeasible ಎಂಬುದನ್ನು ನೋಡಿ ಮಾಡಬೇಕಾದ ಕೆಲಸ. ಆದ್ದರಿಂದ ಒಂದೊಂದು ಪರಿಶೀಲನೆ ಮಾಡುವುದಕ್ಕೆ ಎಷ್ಟು ದಿವಸ ಬೇಕಾಗುತ್ತದೆ ಎನ್ನುವುದು ಆಯಾಯಾ ಕೆಲಸದ ಮೇಲೆ ಹೋಗುತ್ತದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಪ್ರತಿಯೊಂದು ಸಬ್ ಡಿವಿಜನ್ನೂ ಸರಿಯಾಗಿ ಅಭಿವೃದ್ಧಿ ಹೊಂದಬೇಕೆಂಬುದು ಸರ್ಕಾರದ ಮನೋಭಾವ ಅಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ—ಸಂಸ್ಥಾನದ ಪ್ರತಿಯೊಂದು ಭಾಗವೂಕೂಡ ಸಮರ್ಪಕವಾಗಿ ಉತ್ತೇಜನ ಹೊಂದಬೇಕೆಂಬುದು ಸರ್ಕಾರದ ಆಶಯ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗಾದಮೇಲೆ ಇನ್ನು ಮುಂದೆ ಈ ಹಣವನ್ನು ಕೊಡುವಾಗ ತಾವು ಎರ್ನಾ ಸಬ್‌ಡಿವಿಜಕ್‌ಗಳಿಗೂ ಸರಿಯಾಗಿ ಹಂಚಬೇಕೆಂಬ ಒಂದು ನಿಯಮವನ್ನು ಅವರಿಗೆ ತಿಳಿಸಬಲ್ಲರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಸಮಾನವಾಗಿ ಹಂಚುವುದು ಸರಿಯಾದ ರೀತಿ ನೀತಿ ಅಲ್ಲ. ಎಲ್ಲಿ ಅವಶ್ಯಕತೆ ಹೆಚ್ಚೋ ಅಲ್ಲಿಗೆ ಹೆಚ್ಚು ಕೊಡುವುದು, ಅವಶ್ಯಕತೆ ಇಲ್ಲದ ಕಡೆ ಕಡಮೆ ಕೊಡುವುದು ಸರ್ಕಾರದ ನೀತಿ ಆಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಂದು ಕಡೆ ಜಾಸ್ತಿ ಖರ್ಚಾಗುವುದು, ಒಂದು ಕಡೆ ಕಡಮೆ ಖರ್ಚಾಗುವುದು ಆಯಾಯಾ ಕೆಲಸಗಳ ಮೇಲೆ ಹೋಗುತ್ತದೆ ಎಂದು ಹೇಳಿದಿರಿ. ಒಂದು ಕಡೆ ಜಾಗ್ರತೆ ಕೆಲಸ ಮಾಡುವುದು, ಇನ್ನೊಂದು ಕಡೆ ನಿಧಾನ ಮಾಡುವುದು ಇದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂಜೂರಾತಿ ಮಾಡಿದ ಕೆಲಸಗಳಲ್ಲಿ ಕೆಲವು ಕಡೆ ಸಾಧನ ಸಂಪತ್ತು ಅಲ್ಲೇ ದೊರೆಕುತ್ತದೆ; ಕಂಟ್ರಾಕ್ಟರುಗಳು ಮುತುವರ್ಜಿಯಿಂದ ಕೆಲಸ ಮಾಡುತ್ತಾರೆ. ಕೆಲವುಕಡೆ ಆ ರೀತಿ ದೊರಕದೆ ಹಿಂದೆ ಬೀಳುತ್ತದೆ. ಇದೆಲ್ಲಾ ಆಯಾಯ ಪರಿಸ್ಥಿತಿ ಮೇಲೆ ಹೋಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪ್ರಭಾವದ ಮೇಲೆ ಹೋಗುತ್ತದೆ ಎಂಬುದು ಗೊತ್ತೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ತಪ್ಪು ಅಭಿಪ್ರಾಯ ಎಂದು ಆಗಲೇ ಹೇಳಿದ್ದೇನೆ.

Supply of Cement and Steel.

Q.-2042. **Sri A. M. BASAVE GOWDA** (Chikmagalur).—

Will the Government be pleased to state:—

(*a*) whether they are aware of the difficulties of the people in obtaining cement and iron at controlled rates from licensed dealers;

(*b*) whether it is under their contemplation to supply steel and cement through co-operative societies wherever they exist?

A.—**Sri B.D. JATTI** (Chief Minister).-

(*a*) No such instance has come to the notice of Government.

(*b*) *Cement*:—Almost all the Taluk Multi-purpose Co-operative Societies in the old Mysore State have been licensed to deal in cement in their respective taluks. The stock position is comfortable and the permit system has bee$_n$

removed now in respect of Cement Sales.

Steel:—As far as possible Co-operative Institutions are being encouraged to handle Iron and Steel. There are already 90 Co-operative Societies dealing in Iron and Steel received under State's Agricultural quota operated by the Commissioner for Food Production, Bangalore.

ಶ್ರೀ ಎ. ಎಂ. ಬನವೇಗೌಡ.—ಸಿಮೆಂಟು ಸಿಕ್ಕುತ್ತಾ ಇದೆ. ಆದರೆ ಈ ಸೊಸೈಟಿಯಲ್ಲಿ ರೈತರಿಗೆ ಬೇಕಾದ ಉಕ್ಕು ಸಿಕ್ಕದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ಸಿಮೆಂಟ್ ಪರ್ಮಿಟ್ ಇಲ್ಲದೆ ಸಿಕ್ಕುತ್ತದೆ. ಇಂಡಿಯಾ ಸರ್ಕಾರದವರಿಂದ ಐರನ್ ಅಂಡ್ ಸ್ಟೀಲ್‌ಗೆ ಹೆಚ್ಚು ಪರ್ಮಿಟ್ ತೆಗೆದುಕೊಳ್ಳಬೇಕೆಂದು ಹೇಳಿದೆ.

Sri B. R. SUNTHANKAR—Are the Government aware that huge quantities of steel are sold in the open market at exorbitant price?

Sri B. D. JATTI.—It is not correct. There are huge quantities of steel.

Sri S. D. GAONKAR.—May I know what sort of control the Government is having over these licence dealers?

Sri K. F. PATIL.—They will check their accounts. Co-operative Societies are the only licence dealers in regard to agricultural quota.

Dr. R. NAGAN GOWDA.—In answer to (*a*) steel is not mentioned. That means that steel supply is not comfortable. What steps Government will take to see that adequate supply of steel is made for agricultural purposes?

Sri K. F. PATIL.—The very fact that it has not been mentioned there shows that it is not comfortable. Government is trying to do its best to get more quota from the Centre.

Sri B. V. DESAI.—Is there any permit system for steel and cement to regulate the licence?

Sri B. D. JATTI.—For cement there is no need to take any permit.

ಶ್ರೀ ಡಿ. ಟಿ. ಸೀತಾರಾಮರಾವ್.—90 ಸಹಕಾರ ಸಂಘಗಳ ಮೂಲಕ ವಿತರಿಸಾರಿ ಮಾಡುತ್ತಾ ಇದ್ದಾರೆ ಎಂದು ಹೇಳಿದ್ದೀರಿ. ಖಾಸಗೀ ರಿಜಿಸ್ಟರ್ಡ್ ಡೀಲರ್ಸ್ ಎಷ್ಟು ಜನ ಇದ್ದಾರೆ?

ಶ್ರೀ ಕೆ. ಎಫ್. ಪಾಟೀಲ್.—Agricultural quota ನಲುವಾಗಿ ಯಾರಿಗೂ ಖಾಸಗಿಯಾಗಿ ಕೊಡುತ್ತಿಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅಗ್ರಿಕಲ್ಚರರ್ ಕೋಟ ಎನ್ನುವುದರಲ್ಲಿ ಯಾವ ಯಾವುದು ಸೇರುತ್ತದೆ?

ಶ್ರೀ ಕೆ. ಎಫ್. ಪಾಟೀಲ್.—ಅಗ್ರಿಕಲ್ಚರ್‌ಗೆ ಉಪಯೋಗವಾಗತಕ್ಕ ಸಾಮಾನು ಎಲ್ಲಾ ಸೇರುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಅಗ್ರಿಕಲ್ಚರರ್ ಕೋಟಾದಲ್ಲಿ ಗರ್ಡರ್ಸ್ ಕೊಡುತ್ತಾ ಇರುವುದು ಗೊತ್ತೇ?

(ಉತ್ತರವಿಲ್ಲ.)

Sri G. DUGGAPPA.—Whether it is not a fact that one private dealer in Harihar has been given private quota for dealing in iron and steel?

ಶ್ರೀ ಕೆ. ಎಫ್. ಪಾಟೀಲ್.—ಹಿಂದೆ ಅಗ್ರಿಕಲ್ಚರರ್ ಇಂಪ್ಲಿಮೆಂಟ್ಸ್ ಮಾಡುವುದರ ನಲುವಾಗಿ ಕೊಡುತ್ತಾ ಇದ್ದೆವು. ಅದರಲ್ಲಿ ಉಳಿದಿರಬಹುದು. ಇನ್ನೂ ಕೆಲವು ಕಡೆ ಕೊಟ್ಟಿದ್ದರು. ಸ್ಟಾಕ್ ಮಾಡಿದ್ದರೋ ಏನೋ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—Non-agricultural quota, agricultural quota iron and steel quota, ಸಂಪೂರ್ಣವಾಗಿ ಸರ್ಕಾರದ ಹತೋಟಿಯಲ್ಲಿದೆಯೇ?

ಶ್ರೀ ಕೆ.ಎಫ್. ಪಾಟೀಲ್.—Agricultural quota Agriculture Department ಮುಖಾಂತರ, ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್ ಮುಖಾಂತರ ಪ್ರತ್ಯೇಕವಾಗಿ ಕನ್ಸ್ಯೂಮರುಗಳಿಗೆ ಹೋಗುತ್ತಾ ಇದೆ. Industries Department quota, Industries Department ಮುಖಾಂತರ ಹೋಗುತ್ತಾ ಇದೆ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—Agricultural and non-agricultural, ಸರ್ಕಾರದ ಹತೋಟಿಯಲ್ಲಿ ಇದೆಯೇ, ಇಲ್ಲವೇ?

ಶ್ರೀ ಬಿ. ಡಿ. ಜತ್ತಿ.—ಇದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ, Open market ನಲ್ಲಿ ಸಿಕ್ಕದೆ ಇರತಕ್ಕಂಥ ಪದಾರ್ಥ, Black-marketನಲ್ಲಿ ಸಿಕ್ಕುತ್ತಿರುವುದು ಗೊತ್ತಿದೆಯೇ?

ಶ್ರೀ ಬಿ. ಡಿ. ಜತ್ತಿ.—ಯಾವುದಾದರೂ ಸೊಸೈಯಲ್ಲಿ ತೆಗೆದುಕೊಂಡ ಪದಾರ್ಥ, ಹೊರಗಡೆ ಮಾರ್ಕೆಟ್ಟಿನಲ್ಲಿ ಸಿಕ್ಕುತ್ತಿರಬಹುದು.

ಶ್ರೀ ಜಿ. ದುಗ್ಗಪ್ಪ.—ಯಾವ ಕಾರಣ ಲೈಸೆನ್ಸುದಾರರ ಲೈಸೆನ್ಸು ನಿಲ್ಲಿಸಲಾಯಿತು?

ಶ್ರೀ ಕೆ. ಎಫ್. ಪಾಟೀಲ್.—ಈ ವರ್ಷದ ಪ್ರಾರಂಭದಿಂದ, ಯಾವ ವ್ಯಕ್ತಿಗೂ ಕೂಡ ಅಗ್ರಿಕಲ್ಚರರ್ ಇಂಪ್ಲಿಮೆಂಟ್ಸ್ ಮಾಡುವ ನಲುವಾಗಿ ಏಕೆ ಕೊಡಲಿಲ್ಲ ಎಂದರೆ, ಕಬ್ಬಿಣದ ಇಂಪ್ಲಿಮೆಂಟ್ಸ್ ತಯಾರುಮಾಡಿದ ಮೇಲೆ, ತಯಾರುಮಾಡಿದವರು ಯಾರಿಗೆ ಮಾರಾಟ ಮಾಡಬೇಕು ಎನ್ನುವ restrictions ಇಲ್ಲ. ಆದ್ದರಿಂದ ಮತ್ತು Black Market ಸಂಭವದ ಕಾರಣದಿಂದ, ಈ ಪದ್ಧತಿಯನ್ನು ಬಂದ್ ಮಾಡಿದ್ದಾಯಿತು.

Completion of Dasanakere in Honnali Taluk.

Q.—2319. Sri A. S. DUDHYA NAIK (Honnali).—

Will the Government be pleased to state :—

(*a*) whether and if so when sanction has been accorded for the construction of Dasanakere in Honnali Taluk;